ಕರ್ನಾಟಕ ಸರ್ಕಾರ
**ಸಾರ್ವಜನಿಕ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರವರ(ಮ.ಊ.ಯೋ) ಕಛೇರಿ, ಕೆ.ಜಿ.ರಸ್ತೆ, ಬೆಂಗಳೂರು-02**
**ದೂ.ಸಂ:22242943, ಫ್ಯಾಕ್ಸ್ :22271998, ಇ-ಮೇಲ್: jd_mms@yahoo.co.in**

ಸಂಖ್ಯೆ:ಎಂ:1/ಅ.ದಾ/ನಮೂನೆ:3/2009-10 ದಿನಾಂಕ:30.09.2009

ಗೆ,
ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ.

ಮಾನ್ಯರೆ,

**ವಿಷಯ:** 2009-10ನೇ ಸಾಲಿನಲ್ಲಿ ಬಿಸಿಊಟ ಮಾಡುತ್ತಿರುವ ಮಕ್ಕಳ ಸಂಖ್ಯೆಯನ್ನು ಶಾಲೆ ನಡೆದ ದಿನಗಳಿಗೆ ಪಡೆದು ಕ್ರೋಢೀಕರಿಸಿ ನಮೂನೆಯಲ್ಲಿ ಸಲ್ಲಿಸುವ ಬಗ್ಗೆ.

* * * * *

2009-10ನೇ ಸಾಲಿನಲ್ಲಿ ಅಕ್ಷರ ದಾಸೋಹ ದಾಖಲಾತಿ/ಹಾಜರಾತಿ, ಬಿಸಿಊಟ ಮಾಡುತ್ತಿರುವ ಮತ್ತು ಊಟ ಮಾಡದಿರುವ ಮಕ್ಕಳ ಮಾಹಿತಿಯನ್ನು ಈ ಪತ್ರದ ಜೊತೆಯಲ್ಲಿ ಲಗತ್ತಿಸಿರುವ ನಮೂನೆ 5ಬಿ ಯಲ್ಲಿ ದಿನಾಂಕವಾರು, ಶಾಲಾ ಮುಖ್ಯ ಶಿಕ್ಷಕರು / ಮುಖ್ಯ ಅಡುಗೆಯವರು ನಮೂದಿಸುವುದು. ಈ ರೀತಿ ನಮೂನೆಯಲ್ಲಿ ತುಂಬಿದ ಅಂಕಿ ಅಂಶಗಳನ್ನು ತಿಂಗಳ ಕೊನೆಯಲ್ಲಿ ಬಿಇಓ ಗಳು, ಶಾಲಾ ಮುಖ್ಯೋಪಾಧ್ಯಾಯರಿಂದ ಮಾಹಿತಿ ಪಡೆದು ತಾಲ್ಲೂಕು ಹಂತದಲ್ಲಿ ಸಹಾಯಕ ನಿರ್ದೇಶಕರು(ಅ.ದಾ) ರವರ ಜೊತೆಯಲ್ಲಿ ಕ್ರೋಢೀಕರಿಸಿ ಊಟ ಮಾಡುವ ಮಕ್ಕಳ ಸರಾಸರಿ ಕಂಡುಹಿಡಿದು ಉಪನಿರ್ದೇಶಕರಿಗೆ ಸಲ್ಲಿಸುವುದು.

ಮೇಲಿನಂತೆ ಕ್ರೋಢೀಕರಿಸಿದ ಮಾಹಿತಿಯನ್ನು ಜಿಲ್ಲೆಯ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದು ಜಿಲ್ಲಾ ಹಂತದಲ್ಲಿ ಕ್ರೋಢೀಕರಿಸಿ, ಕ್ರೋಢೀಕರಿಸಿದ ಮಾಹಿತಿಯನ್ನು ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸಲ್ಲಿಸುವುದು. ಈ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕಾಗಿರುವುದರಿಂದ ಹೆಚ್ಚು ಆದ್ಯತೆ ನೀಡಿ ಸಂಗ್ರಹಿಸಿ ವಿಳಂಬವಿಲ್ಲದೆ ಸಲ್ಲಿಸುವುದು.

ತಮ್ಮ ನಂಬುಗೆಯ,

(ಡಿ.ವೆಂಕಟೇಶಯ್ಯ)
ಜಂಟಿ ನಿರ್ದೇಶಕರು(ಮ.ಊ.ಯೋ).

**ಪ್ರತಿಯನ್ನು :**
1. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಶಿಕ್ಷಣಾಧಿಕಾರಿಗಳು(ಅ.ದಾ), ಜಿಲ್ಲಾ ಪಂಚಾಯತ್ ಕಛೇರಿ, ಇವರು ಜಿಲ್ಲಾ ಉಪನಿರ್ದೇಶಕರಿಂದ ಕ್ರೋಢೀಕೃತ ಮಾಹಿತಿ ಪಡೆದು ಜಂಟಿ ಸಹಿಯೊಂದಿಗೆ ಈ ಕಛೇರಿಗೆ ಸಲ್ಲಿಸುವುದು.
3. ರಾಜ್ಯದ ಎಲ್ಲಾ ಸಹಾಯಕ ನಿರ್ದೇಶಕರು(ಅ.ದಾ) ತಾಲ್ಲೂಕು ಪಂಚಾಯತ್ ಇವರಿಗೆ ಮುಂದಿನ ಕ್ರಮಕ್ಕಾಗಿ
4. ಎಂ:2 ವಿಭಾಗಕ್ಕೆ
5. ಕಛೇರಿ ಪ್ರತಿ.